<u>ಕರ್ನಾಟಕ ವಿಧಾನ ಪರಿಷತ್ತು</u>

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1000 |
| ಉತ್ತರಿಸುವ ದಿನಾಂಕ | 24-07-2024 |
| ಮಾನ್ಯ ಸದಸ್ಯರ ಹೆಸರು | ಶ್ರೀ ಸುನೀಲ್‌ಗೌಡ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಉಪ ನೋಂದಣಿ ಕಛೇರಿಗಳಲ್ಲಿ ಒಂದೇ ಆಸ್ತಿಯನ್ನು ಬೇರೆ ಬೇರೆಯವರ ಹೆಸರಿನಲ್ಲಿ ನೋಂದಣಿ ಮಾಡಿ ಅಮಾಯಕರ ಆಸ್ತಿಯನ್ನು ಲಪಟಾಯಿಸುತ್ತಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿವೆಯೇ; ಬಂದಿದ್ದಲ್ಲಿ, ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು; | Impersonation ಮತ್ತು ನಕಲಿ ದಾಖಲೆಗಳನ್ನು ಸೃಷ್ಟಿಸಿ ನೋಂದಣಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ನಕಲಿ ದಾಖಲೆ ಸೃಷ್ಟಿಸಿ ನೋಂದಾಯಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಕಳೆದ 3 ವರ್ಷದಲ್ಲಿ 86 ಪ್ರಕರಣಗಳು ದಾಖಲಾಗಿದ್ದು, ವಿವರಗಳನ್ನು **ಅನುಬಂಧದಲ್ಲಿ** ನೀಡಿದೆ.<br><br>ಖೊಟ್ಟಿ ಸುಳ್ಳು, ಸೃಷ್ಟನೆ ದಾಖಲಾತಿಗಳ ಆಧಾರದ ಮೇಲೆ |
| ಆ | ಅಮಾಯಕರ ಆಸ್ತಿಯನ್ನು ಭೂಗಳ್ಳರು ನಕಲಿ ದಾಖಲೆ ಸೃಷ್ಟಿಸಿ ವಶಪಡಿಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇಂತಹ ಎಷ್ಟು ದೂರುಗಳು ದಾಖಲಾಗಿವೆ; (ವಿವರ ನೀಡುವುದು) | ದಸ್ತಾವೇಜು ನೋಂದಣಿ ತಡೆಗಟ್ಟಲು ಕೆಳಕಂಡಂತೆ ಕ್ರಮಗಳನ್ನು ಕೈಗೊಳ್ಳಲಾಗಿದೆ:<br><br>ಸುಳ್ಳು, ಸೃಷ್ಟನೆ ದಸ್ತಾವೇಜುಗಳನ್ನು ನೋಂದಣಿ ಮಾಡಲು ನಿರಾಕರಿಸಲು ಹಾಗೂ ಜಿಲ್ಲಾ ನೋಂದಣಾಧಿಕಾರಿರವರು ಸಂಬಂಧಪಟ್ಟ ಪಕ್ಷಾಕಾರರಿಗೆ ಕಾರಣ ಕೇಳುವ ನೋಟೀಸ್ ಜಾರಿ |
| ಇ | ಇದನ್ನು ತಡೆಗಟ್ಟಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ? | ಮಾಡಿ ದಸ್ತಾವೇಜಿನ ನೋಂದಣಿಯನ್ನು ರದ್ದುಪಡಿಸಲು ನೋಂದಣಿ ಕಾಯ್ದೆ 1908ಗೆ ಕರ್ನಾಟಕ ರಾಜ್ಯಕ್ಕೆ ಅನ್ವಯವಾಗುವಂತೆ ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕ, 2023 (2023ರ ವಿಧಾನಸಭೆಯ ವಿಧೇಯಕ ಸಂಖ್ಯೆ 11) ರನ್ವಯ, ಹೊಸದಾಗಿ ಕಲಂ 22-ಬಿ, 22-ಸಿ ಮತ್ತು 22-ಡಿ ಯನ್ನು ಸೇರ್ಪಡೆ ಮಾಡಲು ಕ್ರಮವಹಿಸಲಾಗಿದ್ದು, ಈ ತಿದ್ದುಪಡಿಗೆ ಘನತೆವೆತ್ತ ರಾಷ್ಟ್ರಪತಿಯವರ ಅಂಕಿತ ಬಾಕಿ ಇರುತ್ತದೆ.<br><br>2. ದಸ್ತಾವೇಜು ನೋಂದಣಿ ಸಮಯದಲ್ಲಿ ಪಕ್ಷಕಾರರ ಆಧಾರ್ ಸಂಖ್ಯೆಯನ್ನು ಪರಿಶೀಲಿಸಲು, Validity of consent based Aadhaar Authentication Service ನ್ನು, ದಿನಾಂಕ:11-03-2024ರ ಅಧಿಸೂಚನೆಯಲ್ಲಿ, ಕರ್ನಾಟಕ ನೋಂದಣಿ ನಿಯಮಗಳು-1965ರ ನಿಯಮ-81ಕ್ಕೆ ತಿದ್ದುಪಡಿ ತರುವ ಮೂಲಕ ಜಾರಿಗೆ ತರಲಾಗಿದೆ. |
| ಈ | ಉಪನೋಂದಣಾಧಿಕಾರಿಗೆ | ನೋಂದಣಿ ಕಾಯ್ದೆ 1908ರ ಕಲಂ 34 ರಡಿ ವಿಚಾರಣೆ ಮಾಡಲು |

| | | |
|---|---|---|
| | ದಾಖಲೆಗಳನ್ನು ಪರಿಶೀಲಿಸುವ ಅಧಿಕಾರವನ್ನು ನೀಡಲಾಗಿದೆಯೇ; ಸದರಿ ಕಛೇರಿಯಲ್ಲಿ ದಾಖಲೆಗಳನ್ನು ನೋಂದಣಿ ಮಾಡುವ ಮುಂಚೆ ದಾಖಲೆಗಳ ನೈಜತೆಯನ್ನು ಪರಿಶೀಲಿಸುವ ಅಧಿಕಾರ ಯಾರಿಗೆ ನೀಡಲಾಗಿದೆ; (ವಿವರ ನೀಡುವುದು) | ಅಧಿಕಾರವಿರುತ್ತದೆ ಹಾಗೂ ಕರ್ನಾಟಕ ನೋಂದಣಿ ನಿಯಮಾವಳಿ 1965ರ ನಿಯಮ 73 ರಡಿಯಲ್ಲಿ ನೋಂದಣಿಗೆ ಹಾಜರುಪಡಿಸಿದ ದಾಖಲೆಗಳ ನೈಜತೆಯನ್ನು ಅಥವಾ ದಸ್ತಾವೇಜಿನ (Legality or Validity of document) ಯನ್ನು ಪರಿಶೀಲಿಸುವ ಅಧಿಕಾರ ಉಪನೋಂದಣಾಧಿಕಾರಿಗಳಿಗೆ ಇರುವುದಿಲ್ಲ. |
| ಉ | ಯಾವುದೇ ದಾಖಲೆಗಳನ್ನು ನೀಡಿದರೆ ನೋಂದಣಿ ಮಾಡುವ ಅಧಿಕಾರವನ್ನು ಉಪನೋಂದಣಾಧಿಕಾರಿ ಹೊಂದಿದ್ದಾರೆಯೇ; ಈ ಕುರಿತು ಸರ್ಕಾರದ ಸ್ಪಷ್ಟನೆ ಏನು; | ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 344 ಮುನೋಮು 2008 ದಿನಾಂಕ: 06-04-2009 ರಂತೆ ನಿವೇಶನಗಳ ನೋಂದಣಿಗೆ ನಿಗಧಿಪಡಿಸಿರುವ ಅಗತ್ಯವಾದ ದಾಖಲೆಗಳನ್ನು ಪಕ್ಷಕಾರರು ದಸ್ತಾವೇಜುಗಳ ನೋಂದಣಿ ಸಮಯದಲ್ಲಿ ಹಾಜರುಪಡಿಸಿದ್ದಲ್ಲಿ ಅಂತಹ ದಸ್ತಾವೇಜುಗಳನ್ನು ನೋಂದಾಯಿಸಲಾಗುತ್ತಿದ್ದು ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸ್ವತ್ತುಗಳಿಗೆ ಸಂಬಂಧಿಸಿದ ದಸ್ತಾವೇಜುಗಳನ್ನು ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 06 ಮುನೋಮು 2013 ದಿನಾಂಕ:18-07-2014 ರಂತೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸ್ವತ್ತುಗಳಿಗಾಗಿ ಇರುವ ಇ-ಸ್ವತ್ತು ತಂತ್ರಾಂಶದಿಂದ ಮಾಹಿತಿ ಪಡೆದು ಉಪ ನೋಂದಣಾಧಿಕಾರಿಗಳು<br><br>ನೋಂದಾಯಿಸಲಾಗುತ್ತಿದೆ. |
| ಊ | ನಕಲಿ ದಾಖಲೆ ಸೃಷ್ಟಿಸಿ ಆಸ್ತಿ ಲಪಟಾಯಿಸುವ ಪ್ರಕರಣಗಳಲ್ಲಿ ಎಷ್ಟು ಜನ ಉಪ ನೋಂದಣಾಧಿಕಾರಿಗಳು ಶಾಮೀಲಾಗಿದ್ದಾರೆ ಮತ್ತು ಅವರುಗಳ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು; | ನಕಲಿ ದಾಖಲೆ ಸೃಷ್ಟಿಸಿ ಆಸ್ತಿ ಲಪಟಾಯಿಸುವ 2 ಪ್ರಕರಣಗಳಲ್ಲಿ ಒಟ್ಟು 7 ಹಿರಿಯ/ ಉಪ ನೋಂದಣಾಧಿಕಾರಿಗಳು ಶಾಮೀಲಾಗಿದ್ದು ಅವರುಗಳ ವಿರುದ್ಧ ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ. |
| ಋ | ಭೂಗಳ್ಳರ ವಿರುದ್ಧ ಕಠಿಣ ಕಾನೂನು ತರುವ ಯೋಜನೆ ಸರ್ಕಾರದ ಮುಂದಿದೆಯೇ; ಅಮಾಯಕರ ಆಸ್ತಿಗಳನ್ನು ವಶಪಡಿಸಿಕೊಳ್ಳುವವರ ವಿರುದ್ಧ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ; (ವಿವರ ನೀಡುವುದು) | ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕ, 2023 (2023ರ ವಿಧಾನಸಭೆಯ ವಿಧೇಯಕ ಸಂಖ್ಯೆ-11) ರಂತೆ ನೋಂದಣಿ ಕಾಯ್ದೆ 1908 ಕ್ಕೆ ಕರ್ನಾಟಕ ರಾಜ್ಯಕ್ಕೆ ಅನ್ವಯವಾಗುವಂತೆ ತಿದ್ದುಪಡಿ ತಂದು ಕಲಂ 22-ಬಿ, 22-ಸಿ ಮತ್ತು 22-ಡಿ ಅನ್ನು ಸೇರ್ಪಡೆ ಮಾಡಲು ಕ್ರಮವಹಿಸಲಾಗಿದ್ದು, ಈ ತಿದ್ದುಪಡಿಗೆ ಘನತೆವೆತ್ತ ರಾಷ್ಟ್ರಪತಿಯವರ ಅಂಕಿತ ಬಾಕಿ ಇರುತ್ತದೆ.<br><br>ದಸ್ತಾವೇಜು ನೋಂದಣಿ ಸಮಯದಲ್ಲಿ ಪಕ್ಷಕಾರರ ಆಧಾರ್ ಸಂಖ್ಯೆಯನ್ನು ಪರಿಶೀಲಿಸಲು, Validity of consent based Aadhaar Authentication Service ನ್ನು, ದಿನಾಂಕ:11-03-2024ರ ಅಧಿಸೂಚನೆಯಲ್ಲಿ, ಕರ್ನಾಟಕ ನೋಂದಣಿ ನಿಯಮಗಳು-1965ರ ನಿಯಮ-81ಕ್ಕೆ ತಿದ್ದುಪಡಿ ತರುವ ಮೂಲಕ ಜಾರಿಗೆ ತರಲಾಗಿದೆ. |

<table>
<tr><td></td><td></td><td></td></tr>
<tr><td>ಎ</td><td>ಋಣಭಾರ ರಾಹಿತ್ಯ ಪ್ರಮಾಣ ಪತ್ರ (Encumbrance Certificate) ಪಡೆಯಲು ಸಾರ್ವಜನಿಕರು ತುಂಬಾ ಕಷ್ಟ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; E.C ಪಡೆಯಲು ಇರುವ ತಾಂತ್ರಿಕ ತೊಂದರೆಗಳನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)</td><td>ಕಾವೇರಿ 2.0 ತಂತ್ರಾಂಶದಲ್ಲಿ ಋಣಭಾರ ಪ್ರಮಾಣ ಪತ್ರದ ವಿತರಣೆ ಸ್ಥಗಿತಗೊಂಡಿರುವುದಿಲ್ಲ.<br><br>ಕಾವೇರಿ 2.0 ತಂತ್ರಾಂಶದಲ್ಲಿ ನೀಡಲಾಗಿರುವ ಋಣಭಾರ ಪ್ರಮಾಣ ಪತ್ರಗಳ ವಿವರ ಈ ಕೆಳಕಂಡಂತಿದೆ.
<table>
<tr><th>ಅವಧಿ</th><th>ಇಸಿ ಪಡೆಯಲು ಸಲ್ಲಿಸಲಾದ ಅರ್ಜಿಗಳ ಸಂಖ್ಯೆ</th><th>ವಿತರಿಸಲಾದ ಇಸಿಗಳು</th><th>ಬಾಕಿ ಇರುವ ಅರ್ಜಿಗಳು</th></tr>
<tr><td>01.06.23 ರಿಂದ 15.07.24</td><td>35,69,159</td><td>35,64,863</td><td>4,296</td></tr>
</table>
ಗಣಕೀಕೃತ ನೋಂದಣಿಗೂ ಪೂರ್ವದಲ್ಲಿ ಅಂದರೆ 2004ಕ್ಕೂ ಮೊದಲು ನೋಂದಣಿಯಾಗಿರುವ ದಸ್ತಾವೇಜುಗಳಿಗೂ ಸಹ ಆನ್‌ಲೈನ್ ಮುಖಾಂತರ ಉಪನೋಂದಣಿ ಕಛೇರಿಗೆ ಭೇಟಿ ನೀಡದಯೇ ಋಣಭಾರ ಪ್ರಮಾಣಪತ್ರ ಪಡೆಯಲು ಅವಕಾಶ ಕಲ್ಪಿಸಲಾಗಿರುತ್ತದೆ.</td></tr>
</table>

ಕಂಇ/128/ಎಂಎನ್‌ಎಸ್‌ಎ/2024

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

ಅನುಬಂಧ - 1

## 1908 ರ ಕಲಂ 82 ಮತ್ತು 83 ರಡಿಯಲ್ಲಿ ಕ್ರಮಕೈಗೊಳ್ಳುವ ಕುರಿತು.

| ಜಯನಗರ | | | | |
|---|---|---|---|---|
| ಕ್ರ.ಸಂ | ಉ.ನೋ.ಕ | ಪ್ರಕರಣ ಸಂಖ್ಯೆ | | |
| | | 2021-22 | 2022-23 | 2023-24 |
| 1 | ತಾವರೆಕೆ | 1 | 2 | - |
| 2 | ಜಯನಗರ | 1 | 1 | - |
| 3 | ಬಿಟಿಎಂ ಲೇಔಟ್ | 1 | - | 1 |
| 4 | ಜೆಪಿ ನಗರ | 1 | - | - |
| 5 | ಶಾಂತಿನಗರ | 1 | - | - |
| 6 | ಬೊಮ್ಮನಹಳ್ಳಿ | 2 | - | - |
| 7 | ಬೇಗೂರು | - | 2 | - |
| 8 | ಕೆಂಗೇರಿ | - | 1 | 1 |
| | ಶಿವಾಜಿನಗರ | | | |
| 9 | ಇಂದಿರಾನಗರ | 1 | 1 | - |
| 10 | ಕೆ.ಆರ್.ಪುರಂ | 3 | 4 | 1 |
| 11 | ಬಾಣಸವಾಡಿ | 3 | 3 | 5 |
| 12 | ಬಿದರಹಳ್ಳಿ | 1 | 2 | 1 |
| 13 | ಶಿವಾಜಿನಗರ | 1 | 1 | 1 |
| 14 | ಹಲಸೂರು | - | 1 | - |
| | ಗಾಂಧಿನಗರ | | | |
| 15 | ಮಲ್ಲೇಶ್ವರಂ | 1 | - | - |
| 16 | ಯಲಹಂಕ | 5 | 1 | - |
| 17 | ಗಾಂಧಿನಗರ | 1 | | - |
| 18 | ಜಾಲ | 1 | 1 | 1 |
| 19 | ಗಂಗಾನಗರ | 2 | - | - |
| | ರಾಜಾಜಿನಗರ | | | |
| 20 | ಮಾದನಾಯಕನಹಳ್ಳಿ | 1 | - | - |
| 21 | ಪೀಣ್ಯ | 1 | - | - |
| 22 | ನಾಗರಭಾವಿ | 1 | - | - |

| | | | | |
|---|---|---|---|---|
| 23 | ವಿಜಯನಗರ | - | 1 | - |
| 24 | ಯಶವಂತಪುರ | 1 | - | - |
| | ಬಸವನಗುಡಿ | | | |
| 25 | ಚಾಮರಾಜಪೇಟೆ | - | - | 3 |
| | ಬೆಂಗಳೂರು ಗ್ರಾಮಾಂತರ | | | |
| 26 | ನೆಲಮಂಗಲ | | 1 | - |
| | ಬಳ್ಳಾರಿ | | | |
| 27 | ಹೊಸಪೇಟೆ | 1 | - | - |
| 28 | ಬಳ್ಳಾರಿ | 1 | - | - |
| | ದಾವಣಗೆರೆ | | | |
| 29 | ದಾವಣಗೆರೆ | 1 | - | - |
| | ಬೆಳಗಾವಿ | | | |
| 30 | ಬೆಳಗಾವಿ | 1 | 1 | - |
| | ಕೋಲಾರ | | | |
| 31 | ಮಾಲೂರು | 1 | - | - |
| 32 | ಮುಳಬಾಗಿಲು | - | 1 | - |
| | ರಾಯಚೂರು | | | |
| 33 | ರಾಯಚೂರು | 1 | - | - |
| 34 | ದೇವದುರ್ಗ | - | 1 | - |
| | ಚಿಕ್ಕಬಳ್ಳಾಪುರ | | | |
| 35 | ಬಾಗೇಪಲ್ಲಿ | 1 | - | - |
| | ಉಡುಪಿ | | | |
| 36 | ಉಡುಪಿ | - | 1 | - |
| 37 | ಕುಂದಾಪುರ | - | 1 | 1 |
| | ಮೈಸೂರು | | | |
| 38 | ಮೈಸೂರು ಉತ್ತರ | - | 1 | - |
| | ಚಾಮರಾಜನಗರ | | | |
| 39 | ಚಾಮರಾಜನಗರ | - | 1 | - |
| 40 | ಹನ್ನೂರು | - | - | 1 |

| | | | | |
|---|---|---|---|---|
| | ತುಮಕೂರು | | | |
| 41 | ತುಮಕೂರು | - | 1 | - |
| | ಮಂಡ್ಯ | | | |
| 42 | ಮಂಡ್ಯ | 1 | - | - |
| 43 | ಮಳವಳ್ಳಿ | - | 1 | - |
| 44 | ಕೆ.ಆರ್.ಪೇಟೆ | - | - | 1 |

ನೋಂದಣಿ ಉಪಮಹಾಪರಿವೀಕ್ಷಕರು
(ಆಡಳಿತ ಮತ್ತು ಕಾನೂನು)
ಬೆಂಗಳೂರು